## ನಿಮ್ಮೊಡನೆ

# ‘ಶತಮೂರ್ಖ’ರ ಪೆಟ್ಟಿಗೆಯಲ್ಲಿ..

ಮೂಢನಂಬಿಕೆಗಳನ್ನು ಜನರಿಂದ ದೂರ ಮಾಡುವ ಹೊಣೆಗಾರಿಕೆಯುಳ್ಳ ಸರ್ಕಾರದ ಉನ್ನತ ಮಂತ್ರಿಗಳು ಬಾಬಾಗಳ ಪದತಲದಲ್ಲಿ ಬಹಿರಂಗವಾಗಿಯೇ ಕಾಣಿಸಿಕೊಳ್ಳುತ್ತಿದ್ದಾರೆ. ಜನರ ಮಧ್ಯೆ ಮೂಢನಂಬಿಕೆಗಳನ್ನು ಬಿತ್ತುವ ಟಿ.ವಿ ವಾಹಿನಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕಾದ ಜವಾಬ್ದಾರಿ ಉಳ್ಳ ವಿಜ್ಞಾನ–ತಂತ್ರಜ್ಞಾನ ಖಾತೆಯ ಸಚಿವರು ಕೆಲಸವೇ ಇಲ್ಲದಂತೆ ನಾಪತ್ತೆಯಾಗಿದ್ದಾರೆ.



‘ಸುದ್ದಿಮಾಧ್ಯಮಗಳ ಮುಖ್ಯ ಕೆಲಸ ಸತ್ಯಶೋಧನೆ’ ಎನ್ನುವುದೀಗ ಹಳಸಲು ವಾಕ್ಯ. ಅದರಲ್ಲೂ ಟಿ.ವಿ ಚಾನೆಲ್‌ಗಳ ಕಾರ್ಯ ನಿರ್ವಹಣೆಯನ್ನು ಗಮನಿಸಿದರೆ ಸತ್ಯಶೋಧನೆ ಮತ್ತು ಸುದ್ದಿ ನಿಷ್ಠೆಯ ಧ್ಯೇಯವಾಕ್ಯಗಳು ಕಣ್ಮರೆಯಾಗತೊಡಗಿವೆ. ಇವತ್ತು ಟಿ.ವಿ ಚಾನೆಲ್‌ಗಳಿಗೆ ಸುದ್ದಿ ಅಂದರೆ ವೈಭವೀಕರಣ; ಸುದ್ದಿ ಅಂದರೆ ನಾಟಕೀಯ ನಿರೂಪಣೆ. ಟಿಆರ್‌ಪಿ ರೇಟ್ ಹೆಚ್ಚಿಸಿಕೊಳ್ಳುವ ಭರದಲ್ಲಿ ಸುದ್ದಿಗೆ ಭರಪೂರ ಮಸಾಲೆ ಹಚ್ಚುವ ಕೆಲಸ ಮುಜುಗರವಿಲ್ಲದೆ ನಡೆದಿದೆ. ಜತೆಗೆ ಟಿ.ವಿ ಚಾನೆಲ್‌ನ ಜನಪ್ರಿಯತೆಯನ್ನು ಹೆಚ್ಚಿಸಲು ಏನೆಲ್ಲ ಅವೈಜ್ಞಾನಿಕ, ಅಮಾನವೀಯ, ಮಸಾಲೆ ಕಾರ್ಯಕ್ರಮಗಳನ್ನು ನಡೆಸಬಹುದೋ ಅಷ್ಟೆಲ್ಲವನ್ನೂ ನಡೆಸಲಾಗುತ್ತಿದೆ. ಚಾನೆಲ್‌ಗಳ ಈ ‘ಟಿಆರ್‌ಪಿ ಓಟ’ದಲ್ಲಿ ವೈಜ್ಞಾನಿಕ ಮನೋಭಾವ, ಸಾಮಾಜಿಕ ನ್ಯಾಯ, ಮನುಷ್ಯತ್ವದ ಕಾಳಜಿ– ಮುಂತಾದ ಎಲ್ಲ ಮೌಲ್ಯಗಳೂ ಕಾಲ್ತುಳಿತಕ್ಕೆ ಸಿಕ್ಕಿವೆ. ಕೆಲವು ಚಾನೆಲ್‌ಗಳಲ್ಲಿ ಈ ಮೌಲ್ಯಗಳ ಅಲ್ಪಸ್ಮರಣೆ ನಡೆದಿದ್ದರೂ ಅದು ಒಂದೆರಡು ಕಾರ್ಯಕ್ರಮಗಳಿಗಷ್ಟೆ ಸೀಮಿತವಾಗಿದೆ.

ಇತ್ತೀಚೆಗೆ ನಡೆದ ಸೂರ್ಯಗ್ರಹಣದ ವಿದ್ಯಮಾನವನ್ನೇ ಗಮನಿಸಿ. ಸೂರ್ಯಗ್ರಹಣದ ಬಗ್ಗೆ ನಮ್ಮ ಸಮಾಜದಲ್ಲಿ ಈಗಾಗಲೆ ಬೇರು ಬಿಟ್ಟಿರುವ ಮೂಢನಂಬಿಕೆಗಳನ್ನು ಮತ್ತಷ್ಟು ಬಲಗೊಳಿಸುವಂತೆ ಹಲವು ಟಿ.ವಿ ಚಾನೆಲ್‌ಗಳು ವರ್ತಿಸಿದವು. ಸೂರ್ಯಗ್ರಹಣದಿಂದ ಉಂಟಾಗುವ ‘ಅಪಾಯ’ಗಳ ಬಗ್ಗೆ ಚಾನೆಲ್‌ಗಳು ಮನಸೋ ಇಚ್ಛೆ ಸುದ್ದಿಗಳನ್ನು ಹರಿಬಿಟ್ಟವು. ಚಾನೆಲ್‌ಗಳಲ್ಲಿ ಜ್ಯೋತಿಷಿಗಳ ‘ಪರಿಹಾರ ಬುರುಡೆ’ಗಳ ಬಿರಡೆ ತೆರೆದುಕೊಂಡು ದಿನವಿಡೀ ಜನ ಗೊಂದಲದಲ್ಲಿ ಮುಳುಗಿದರು. ನಕಲಿ ಜ್ಯೋತಿಷಿಗಳು, ಸಮ್ಮೋಹಿನಿ ಬಾಬಾಗಳ ಕಾಟ ಇವತ್ತು ಎಷ್ಟು ಹೆಚ್ಚಾಗಿದೆಯೆಂದರೆ, ಯಾವ ಟಿ.ವಿ ಚಾನೆಲ್ ನೋಡಿದರೂ ಅಲ್ಲಿ ಇವರ ಹಾಜರಿ ಕಡ್ಡಾಯ ಎನ್ನುವಂತಾಗಿದೆ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಉದ್ಭವವಾಗುವ ಎಲ್ಲ ರೀತಿಯ ಸಾಮಾಜಿಕ, ಕೌಟುಂಬಿಕ ಸಮಸ್ಯೆಗಳಿಗೂ ಇವತ್ತು ಜ್ಯೋತಿಷದಲ್ಲೇ ಪರಿಹಾರ ಎನ್ನುವ ದುಸ್ಥಿತಿ ಉಂಟಾಗಿದೆ. ಇದರ ಪರಿಣಾಮವಾಗಿ ಮನುಷ್ಯ ಪ್ರಯತ್ನಗಳಲ್ಲಿ ಜನರಿಗೆ ನಂಬಿಕೆ ಕಡಿಮೆಯಾಗತೊಡಗಿದೆ.

ಟಿ.ವಿ.ಗಳಲ್ಲಿ ಗ್ರಾಹಕ ಸಂಸ್ಕೃತಿಯನ್ನು ವೀಕ್ಷಕರ ಮೇಲೆ ಹೇರುತ್ತಿರುವ ಜಾಹೀರಾತುಗಳದ್ದೇ ಅತಿ ದೊಡ್ಡ ಕಾಟ ಎಂದು ಈವರೆಗೆ ಭಾವಿಸಲಾಗಿತ್ತು. ಜತೆಗೆ ಅಶ್ಲೀಲ ನೃತ್ಯ–ಸಂಗೀತಗಳ ಕಾಟವೂ ಇತ್ತು. ಆದರೆ ಈಗ ಅದೆಲ್ಲವನ್ನೂ ಮೀರಿಸುವಂತೆ, ‘ಪೂರ್ವಜನ್ಮದ ನೆನಪುಗಳನ್ನು ಮರುಕಳಿಸುವ’ ಮೂಢನಂಬಿಕೆಯ ಪ್ರಸಾರದ ಕಾರ್ಯಕ್ರಮಗಳ ಭರಾಟೆ ಜೋರಾಗಿದೆ. ‘ಮನಸ್ಸಿಟ್ಟು ದುಡಿದರೆ ಈ ಜನ್ಮದ ಸಮಸ್ಯೆಗಳಿಗೆ ಇಲ್ಲೇ ಪರಿಹಾರ ಸಿಗುತ್ತದೆ’ ಎನ್ನುವ ಕಾಮನ್‌ಸೆನ್ಸ್ ಕೂಡಾ ಇಲ್ಲದ ಮೂರ್ಖ ಜನ, ಬೂದಿ ಬಾಬಾಗಳನ್ನು ನಂಬಿಕೊಂಡು ಪೂರ್ವಜನ್ಮ ಎಂಬ ಮೂಢನಂಬಿಕೆಯ ಕೂಪಕ್ಕೆ ಬೀಳುತ್ತಿದ್ದಾರೆ. ಮನುಷ್ಯನೊಬ್ಬ ಸತ್ತ ಮೇಲೆ ಮೆದುಳು ಸಹಿತ ಆತನ ಎಲ್ಲ ಅಂಗಾಂಗಗಳೂ ಸಾಯುತ್ತವೆ ಎನ್ನುವ ಸರಳ ವಾಸ್ತವವೂ ಗೊತ್ತಿಲ್ಲದ ಜನ ಸಮ್ಮೋಹನ ವಿದ್ಯೆಯನ್ನೇ ಸಕಲ ರೋಗಗಳಿಗೂ ಪರಿಹಾರ ಎಂದು ತಿಳಿಯುತ್ತಿರುವುದು ಅಪಾಯಕಾರಿ ಬೆಳವಣಿಗೆ.

ಇಂತಹ ಮೂಢನಂಬಿಕೆಗಳನ್ನು ಜನರಿಂದ ದೂರ ಮಾಡುವ ಹೊಣೆಗಾರಿಕೆಯುಳ್ಳ ಸರ್ಕಾರದ ಉನ್ನತ ಮಂತ್ರಿಗಳು ಬಾಬಾಗಳ ಪದತಲದಲ್ಲಿ ಬಹಿರಂಗವಾಗಿಯೇ ಕಾಣಿಸಿಕೊಳ್ಳುತ್ತಿದ್ದಾರೆ. ಜನರ ಮಧ್ಯೆ ಮೂಢನಂಬಿಕೆಗಳನ್ನು ಬಿತ್ತುವ ಟಿ.ವಿ ವಾಹಿನಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕಾದ ಜವಾಬ್ದಾರಿ ಉಳ್ಳ ವಿಜ್ಞಾನ– ತಂತ್ರಜ್ಞಾನ ಖಾತೆಯ ಸಚಿವರು ಕೆಲಸವೇ ಇಲ್ಲದಂತೆ ನಾಪತ್ತೆಯಾಗಿದ್ದಾರೆ. ಸೂರ್ಯಗ್ರಹಣದ ವೀಕ್ಷಣೆಗೆ ಸೂಕ್ತ ವ್ಯವಸ್ಥೆ ಮಾಡಿ, ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಬೇಕಾದ ಶಾಲೆಗಳೇ ಅವತ್ತು ಬಾಗಿಲು ಮುಚ್ಚಿಕೊಂಡಿದ್ದವು! ವಿಜ್ಞಾನ ಕಲಿಸುವ ಶಿಕ್ಷಕರೂ ಕದವಿಕ್ಕಿಕೊಂಡು ಮನೆಯೊಳಕ್ಕೆ ಅವಿತುಕೊಂಡಿದ್ದರೆಂದರೆ ನಮ್ಮ ಸಮಾಜ ಎಷ್ಟು ಹಿಂದಕ್ಕೆ ಸಾಗುತ್ತಿದೆ ಎನ್ನುವುದು ಅರಿವಾದೀತು.

ಟಿ.ವಿ.ಗಳು ‘ಶತಮೂರ್ಖರ ಪೆಟ್ಟಿಗೆ’ಯಾಗಿ, ಚಿಕಿತ್ಸೆಯ ಹೆಸರಿನಲ್ಲಿ ಡೋಂಗಿ ವಿದ್ಯೆಗಳೇ ವಿಜೃಂಭಿಸುತ್ತಿರುವ ಕಾಲದಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಕೆಲಸವನ್ನು ವಿಜ್ಞಾನಿಗಳಾದರೂ ಕೈಗೆತ್ತಿಕೊಳ್ಳುವರೆ? ಅಥವಾ ಅವರೂ ರಾಹುಕಾಲ, ತುಲಾಭಾರಗಳಡಿಯಲ್ಲಿ ಸಿಲುಕಿ ಏದುಸಿರು ಬಿಡುವುದನ್ನು ಮುಂದುವರಿಸುವರೆ? ಮೂಢನಂಬಿಕೆಗಳ ವಿರುದ್ಧ ಜನರನ್ನು ಬಡಿದೆಬ್ಬಿಸುವ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡುತ್ತಿದ್ದ ಡಾ.ಎಚ್.ನರಸಿಂಹಯ್ಯ ಅವರಂತಹ ಹಿರಿಯರೂ ಈಗ ಇಲ್ಲವಾಗಿದ್ದಾರೆ. ವೈಜ್ಞಾನಿಕ ಮನೋಭಾವ ಪ್ರಸರಿಸುವ ಕಾರ್ಯಕ್ರಮಗಳನ್ನು ಎಲ್ಲ ಶಾಲೆಗಳಲ್ಲೂ ಕಡ್ಡಾಯವಾಗಿ ರೂಪಿಸುವ ಅಗತ್ಯ ಇವತ್ತು ಹಿಂದೆಂದಿಗಿಂತ ಹೆಚ್ಚಾಗಿದೆ. ಈ ನಿಟ್ಟಿನಲ್ಲಿ ಜನ ಎಚ್ಚೆತ್ತುಕೊಳ್ಳದಿದ್ದರೆ ಸಮಾಜದಲ್ಲಿ ಮೂಢ ನಂಬಿಕೆಗಳ ಜತೆಗೆ ಶೋಷಣೆ ಮತ್ತು ಮೃಗಳ್ಳತನ ಇನ್ನಷ್ಟು ಹೆಚ್ಚಾಗಲಿದೆ.

■ ಬಿ.ಎಂ. ಹನೀಫ್